

ಗಂಡು-ಹೆಣ್ಣು ಒಟ್ಟೊಟ್ಟಿಗೆ ಒಂದೇ ಲಯದಲ್ಲಿ ನೆಗೆದು ಹಾರುತ್ತವೆ.

ಮೊದಲ ಸಲ ಈ ಸೇತುವೆಯ ಮೇಲೆ ಪರಿಚಯವಾದವರು ನಗುಮೊಗದ ಪಕ್ಷಿಪ್ರೇಮಿ ಉಮೇಶ್. ಇವರು ಗಣೇಶಗುಡಿಯ ಸ್ಥಳೀಯ ನಿವಾಸಿ. ಮಂಗಟ್ಟೆ ಹಕ್ಕಿಗಳ ಬಗ್ಗೆ ಕುತೂಹಲ ಹುಟ್ಟಿಸುವ ಹೊಸ ಸಂಗತಿಗಳನ್ನು ಹೇಳುತ್ತಾ ಹೋದರು. ನನ್ನ ಮಟ್ಟಿಗೆ ಇವು ದಿಗ್ಭ್ರಮೆ ಹುಟ್ಟಿಸುವ ಸೋಜಿಗದ ಮಾಹಿತಿಗಳಾಗಿದ್ದವು. ಮಂಗಟ್ಟೆ ಹಕ್ಕಿಗಳ ಬದುಕಿನ ಮೇಲೆ ಜೂಜಿಗೆ ಸಿಕ್ಕವರಂತೆ ಇಪ್ಪತ್ತು ವರ್ಷ ಸವೆಸಿರುವ ಉಮೇಶ್, ಹಾರ್ನ್ ಬಿಲ್ ಪಕ್ಷಿಗಳ ರಕ್ತಸಂಬಂಧಿಯೇ ಆಗಿದ್ದಾರೆ. ಈ ಪಕ್ಷಿಗಳ ಬೆನ್ನುಹತ್ತಿ ಪ್ರತಿದಿನವೂ ಕಾಲ ಕಳೆಯಬಲ್ಲ ಇವರಿಗೆ ಎಂದೂ ಮಂಗಟ್ಟೆ ಬಗ್ಗೆ ಬೇಸರ ಎನಿಸಿಲ್ಲ. ದಾಸ ಮಂಗಟ್ಟೆ ಹಕ್ಕಿಗಳ ಕಲರವ ಇರುವ ಜಾಗದಲ್ಲೇ ಮಣ್ಣಾಗಬೇಕೆಂಬುದು ನನ್ನ ಕೊನೆಯ ಆಸೆ ಎಂದು ಭಾವುಕರಾಗಿ ನಿಂತರು.

ವಿಶಾಲ ತಿಳಿ ನೀರ ಹರಿವಿನ ನದಿಯ ಇಕ್ಕೆಲಗಳ ಕಾಡಿನಲ್ಲಿ ರಾತ್ರಿ ಕಳೆಯುವುದನ್ನು ಮಂಗಟ್ಟೆ ಇಷ್ಟಪಡುತ್ತವೆ. ಅಚ್ಚರಿ ಎಂದರೆ ಇಡೀ ಜೀವನದಲ್ಲಿ ಒಮ್ಮೆಯೂ ಇವು ನೀರನ್ನು ಕುಡಿಯುವುದಿಲ್ಲವಂತೆ. ಹಣ್ಣಿನ ರಸಾಂಶದಲ್ಲಿರುವ ನೀರೇ ಇದರ ಬದುಕು. ನೀರನ್ನು ಸೇವಿಸದೇ ಬಾಳುವ ಈ ಹಕ್ಕಿ ನೀರಿನಲ್ಲಿ ಕೂಡ ಎಂದಿಗೂ ಸ್ನಾನವನ್ನೂ ಮಾಡುವುದಿಲ್ಲ. ನೀರಿಗೂ ಇದಕ್ಕೂ ಯಾಕೋ ಆಗಿ ಬರುವುದಿಲ್ಲ. ಏನಿದ್ದರೂ ಮಣ್ಣಿನಲ್ಲಿ ಮಿಂದೇಳುವುದಷ್ಟೇ ಇದರ ಜಳಕ ಕ್ರಮ. ಇತರೆ ಹಕ್ಕಿಗಳು ನೀರಿನ ಸ್ನಾನವನ್ನು ಬಲು ಖುಷಿಯಿಂದ ಮಾಡುತ್ತವೆ. ಆದರೆ ಮಂಗಟ್ಟೆಗೆ ಮಾತ್ರ ನಿಸರ್ಗ ನಿರ್ಬಂಧ ವಿಧಿಸಿದೆ.

ಮಂಗಟ್ಟೆ ಹಕ್ಕಿಯ ಪ್ರೇಮ ಶುರುವಾಗುವುದೇ ಗಂಡಕ್ಕಿ ತನ್ನ ಪ್ರಿಯತಮೆಗೆ ಮಣ್ಣನ್ನು ತಿನಿಸುವುದರ ಮೂಲಕ. ಗಂಡಕ್ಕಿಯ ಬಾಯಿಂದ ಹೆಣ್ಣು, ಮಣ್ಣು ಸ್ವೀಕರಿಸಿದರೆ ಪ್ರೇಮಬಂಧನಕ್ಕೆ ಒಪ್ಪಿಗೆ ಸಿಕ್ಕ ಹಾಗೆ. ನಂತರ ಗಂಡು, ಹಣ್ಣನ್ನು ಹೆಣ್ಣಿಗೆ ತಿನ್ನಿಸಿ ತನ್ನ ಪ್ರೀತಿಯ ಸ್ಪಷ್ಟ ನಿವೇದನೆ ಮಾಡುತ್ತದೆ. ಹಾಗೆಯೇ ಹಾರಾಡುವ ಸಣ್ಣ ಬಾವಲಿಗಳನ್ನು ಹಿಡಿದು ಕೊಟ್ಟು 'ನಾನು ನಿನ್ನನ್ನು ಇಷ್ಟಪಡುತ್ತೇನೆ ಕಣೇ' ಎಂದು ಪಿಸುಗುಡುವುದುಂಟು. ನೋಡುವಾಗ ಮಂಗಟ್ಟೆ ಗಂಡು ಹಕ್ಕಿಯ ಕಣ್ಣು ಕೆಂಪಾಗಿರುತ್ತದೆ. ಅದೇ